ಉ) 1999ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದ ಮತ್ತು 2000 ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಾವಳಿಯ ಹಾಗೂ ಅವುಗಳಡಿ ಕಾಲಕಾಲಕ್ಕೆ ಹೊರಡಿಸುವ ಸ್ಥಾಯಿ ಆದೇಶಗಳಂತೆ.

ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಗೆ ಹೆಚ್ಚಿನ ನೆರವು

2030(1912) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿ ನಗರ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಗೆ 2001-02 ಹಾಗೂ 2002-03 ರಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರ ನೀಡಿದ ನೆರವೆಷ್ಟು;

ಆ) ಮೇಲ್ಕಂಡ ಸಾಲಿನಲ್ಲಿ ರೋಗಿಗಳಿಂದ ಬಂದಿರುವ ಯೂಸರ್ಸ್ ಚಾರ್ಜ್ ವರಮಾನವೆಷ್ಟು;

ಇ) ಈ ಸಂಸ್ಥೆಯಲ್ಲಿ ರೋಗಿಗಳಿಗೆ ಉತ್ತಮ ವೈದ್ಯಕೀಯ ಸೌಲಭ್ಯ ಒದಗಿಸಲಾಗುತ್ತಿದೆ ಎಂದು ಲೋಕಾಯುಕ್ತ ಪ್ರಶಂಸೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿವೆಯೇ;

ಈ) ಹಾಗಿದ್ದಲ್ಲಿ, ಈ ಸಂಸ್ಥೆಯಲ್ಲಿ ರೋಗಿಗಳಿಗೆ ಇನ್ನು ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಹೆಚ್ಚಿನ ಹಣಕಾಸಿನ ನೆರವನ್ನು ಒದಗಿಸುತ್ತದೆಯೇ?

ಡಾ।। ಎ.ಬಿ. ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಸಚಿವರು):

ಅ) (ಲಕ್ಷ ರೂ.ಗಳಲ್ಲಿ)

	2001-2002		2002-2003	
	ಯೋಜನೆ	ಯೋಜನೇತರ	ಯೋಜನೆ	ಯೋಜನೇತರ
1) ರಾಜ್ಯ ಸರ್ಕಾರ	390.00	836.04	120.00	1014.06
2) ಕೇಂದ್ರ ಸರ್ಕಾರ	75.00	.....	75.00	.....

ಆ) 2001-2002 2002-2003
476.32 ಲಕ್ಷಗಳು 500.00 ಲಕ್ಷಗಳು
(ಅಂದಾಜು)

ಇ) ಹೌದು

ಈ) ಪರಿಶೀಲನೆಯಲ್ಲಿದೆ.

ಕಿದ್ವಾಯಿ ಸ್ಮಾರಕಗ್ರಂಥಿ ಸಂಸ್ಥೆಯಲ್ಲಿ ದಾಖಲಾಗುವ ಕ್ಯಾನ್ಸರ್ ರೋಗಿಗಳು

2031(1913) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2001-02 ಹಾಗೂ 2002-03ರಲ್ಲಿ ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಗೆ ಬಂದ ಹೊರ ರೋಗಿಗಳ ಸಂಖ್ಯೆ ಎಷ್ಟು ಹಾಗೂ ದಾಖಲಾದ ಒಳ ರೋಗಿಗಳೆಷ್ಟು;

ಆ) ಮೇಲ್ಕಂಡ ಸಾಲಿನಲ್ಲಿ ಸರ್ಕಾರ ಈ ಸಂಸ್ಥೆಗೆ ನೀಡಿದ ಅನುದಾನವೆಷ್ಟು;

ಇ) ಮೇಲ್ಕಂಡ ಸಾಲಿನಲ್ಲಿ ಎಷ್ಟು ಕ್ಯಾನ್ಸರ್ ರೋಗಿಗಳನ್ನು ಪತ್ತೆ ಹಚ್ಚಲಾಗಿದೆ;

ಈ) ಯಾವ ಕ್ಯಾನ್ಸರ್‌ನಿಂದ ಬಳಲುತ್ತಿರುವವರು ಹೆಚ್ಚಿನ ಸಂಖ್ಯೆಯಲ್ಲಿ ಪತ್ತೆಯಾಗಿದೆ;

ಉ) ರಾಜ್ಯದಲ್ಲಿ ಕ್ಯಾನ್ಸರ್ ರೋಗದ ಬಗ್ಗೆ ಜಾಗೃತಿ ಮೂಡಿಸಲು ಈ ಸಂಸ್ಥೆ ಮೇಲ್ಕಂಡ ಸಾಲಿನಲ್ಲಿ ಕೈಗೊಂಡ ಕ್ರಮಗಳೇನು;